# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## –:ವಾರ್ಡ್–42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:–

ಎಂದಿನಂತೆ ದಿನಾಂಕ:– 01.10.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ:–42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಸಭೆಗೆ ಹಾಜರಿದ್ದ ಅಧಿಕಾರಿಗಳು:–**

1. ಶ್ರೀ.ರಮೇಶ್ ಎನ್. ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ ಕೆ. ಕಂದಾಯ ಪರಿವೀಕ್ಷಕರು ವಾರ್ಡ್ ನಂ.42.
3. ಶ್ರೀ.ಮಂಜುನಾಥ್.ಬಿ.ಸಿ. ಕಿರಿಯ ಅಭಿಯಂತರರು, ಬೆಸ್ಕಾಂ, ವಾರ್ಡ್ ನಂ.42.
4. ಶ್ರೀ. ನಾರಾಯಣ ಸ್ವಾಮಿ, ಸೂಪರ್ ವೈಸರ್ ಎಸ್. ಡಬ್ಲ್ಯೂ.ಎಂ.
5. ಶ್ರೀ. ದೇವರಾಜು, ಮೇಲ್ವಿಚಾರಕರು, ವಾರ್ಡ್ ನಂ.42.
6. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
7. ಶ್ರೀಮತಿ. ವಲರ್ಮದಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
8. ಶ್ರೀ. ನಾಗರಾಜು, ಸೂಪರ್ ವೈಸರ್.
9. ಶ್ರೀ. ಮುತ್ಯಾಲಪ್ಪ, ಸೂಪರ್ ವೈಸರ್.
10. ಶ್ರೀಮತಿ. ಪ್ರಮಿಳ ಎಂ.ಸಿ. ಲಿಂಕ್ ವರ್ಕರ್ಸ್, ಎಸ್.ಡಬ್ಲ್ಯೂ.ಎಂ.
11. ಶ್ರೀಮತಿ.ಧಾಕ್ಷಾಯಣಿ, ಎಂ. .ಸಿ. ಲಿಂಕ್ ವರ್ಕರ್ಸ್, ಎಸ್.ಡಬ್ಲ್ಯೂ.ಎಂ.
12. ಶ್ರೀ ಗೌತಮ್ ರಾಜು ಮಾರ್ಶಲ್ ವಾರ್ಡ್–42.
13. ಎಂ.ವಿ ಶಿವಶಂಕರ್ ಎ.ಎಸ್.ಐ ನಂದಿನಿ ಲೇಔಟ್ ಪೋಲಿಸ್ ಠಾಣೆ.
14. ಶ್ರೀ ಎಸ್. ರಮೇಶ್ ಎ.ಎಸ್.ಐ ರಾಜಾಜಿನಗರ ಸಂಚಾರಿ ಪೋಲಿಸ್ ಠಾಣೆ.
15. ವಾರ್ಡಿನ ಎಲ್ಲಾ ಅಧ್ಯಕ್ಷರು, ಮಹಿಳಾ ಪದಾಧಿಕಾರಿಗಳು ಆಗಮಿಸಿದ್ದರು.

**ಸಭೆಗೆ ಗೈರು ಹಾಜರಿದ್ದ ಅಧಿಕಾರಿಗಳು:–**

01. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು
02. ಬೀದಿ ದೀಪಗಳ ಪರಿವೀಕ್ಷಕರು
03. ಪಶು ಸಂಗೋಪನೆ ಇಲಾಖೆ ವಾರ್ಡ್–42.
04. ಅಗ್ನಿ ಶಾಮಕ ಠಾಣೆ, ಟಿ.ವಿ.ಎಸ್.ಕ್ರಾಸ್ ಪೀಣ್ಯ.

ವಾರ್ಡ್–42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಶಶಿಕುಮಾರ್ ರವರು ಮಾತನಾಡಿ ಸಾಕಷ್ಟು ದಿನಗಳಿಂದ ಮಳೆ ನೀರಿನ ಕಾಲುವೆಯೊಂದರ ಅಂಚು ತೆರೆದಿದ್ದು, ಅದನ್ನು ಮುಚ್ಚಿಸಿದ ಸಹಯಾಕ ಕಾರ್ಯಪಾಲಕ ಅಭಿಯಂತರರು ಗೊರಗುಂಟೆಪಾಳ್ಯ ಉಪವಿಭಾಗ ರವರಿಗೆ ಅಭಿನಂದನೆಯನ್ನು ತಿಳಿಸಿದರು.

ಮಧು ರವರು ಮಾತನಾಡಿ ಕೂಲೀ ನಗರ ಸೇತುವೆ ಮೇಲೆ ವಾಹನ ದಟ್ಟನೆ ಹೆಚ್ಚಾಗಿದ್ದು ವಾಹನಗಳಿಂದ ಮತ್ತು ಸಾರ್ವಜನಿಕರಿಗೂ ತುಂಬಾ ತೊಂದರೆಯಾಗುತ್ತಿದ್ದು ಕೂಡಲೇ ಸಂಚಾರ ಪೋಲಿಸರಿಗೆ ಅಗತ್ಯ ಕ್ರಮ ಕೈಗೊಳ್ಳಲು ವಿನಂತಿಸಿದರು.

**ಕ್ರಮ.ಸಂಚಾರ ಪೋಲಿಸ್, ನಂದಿನಿ ಬಡಾವಣೆ.**

ಶಶಿಕುಮಾರ್ ರವರು ಮಾತನಾಡಿ ನಂದಿನಿ ಲೇಔಟ್‌ನ ಮಾರ್ಕೆಟ್ ರಸ್ತೆಯಲ್ಲಿರುವ ಬೀದಿ ವ್ಯಾಪಾರಿಗಳು ರಸ್ತೆ ಮಧ್ಯಕ್ಕೆ ಸ್ಟಾಲ್‌ಗಳನ್ನು ಹಾಕುತ್ತಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ಕೂಡಲೇ ಸಂಬಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳಬೇಕೆಂದು ವಿನಂತಿಸಿದರು.

**ಕ್ರಮ:–ಹಿರಿಯ ಆರೋಗ್ಯ ಅಧಿಕಾರಿ ವಾರ್ಡ್–42.**

ಅಮ್ಮು ವಾರ್ಡ್ ಸದಸ್ಯರು ಮಾತನಾಡಿ ಕರೆಂಟ್ ಕಂಬಗಳು ಬಹಳ ವರ್ಷಗಳಿಂದ ಇದ್ದು ಅವುಗಳು ಬಹಳ ಹಳೆಯದಾಗಿ ರಸ್ತೆಗೆ ವಾಲುತ್ತಿದ್ದು ವಾಹನ ಸವಾರರ ಮೇಲೆ ಅಥವಾ ಪಾದಚಾರಿಗಳ ಮೇಲೆ ತೀವ್ರ ಗಾಳಿ ಹಾಗೂ ಮಳೆಯಾದಾಗ ಕಂಬಗಳು ಬೀಳುವ ಸಂಭವವಿದ್ದು ಕೂಡಲೇ ಸಂಬಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳಬೇಕೆಂದು ವಿನಂತಿಸಿದರು.

**ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆ.ಸಾ.ಕಂ**

ಶಶಿಕುಮಾರ್ ರವರು ಮಾತನಾಡಿ ವೀಣಾ ಸ್ಕೂಲ್ ಮತ್ತು ಗೀತ ಸ್ಕೂಲ್ ಹತ್ತಿರ ಬೋರ್‌ವೆಲ್‌ಗಳನ್ನು ಕೊರೆದು ಹಾಗೇಯೇ ಬಿಟ್ಟಿರುವ ಕಾರಣ ಸಾರ್ವಜನಿಕರು ಒಡಾಡುವ ಸಮಯದಲ್ಲಿ ಅಪಾಯ ಉಂಟಾಗುವ ಸಂಭವವಿರುವುದರಿಂದ ಕೂಡಲೇ ಸಂಬಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳಬೇಕೆಂದು ವಿನಂತಿಸಿದರು.

**ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ವಾಂಬೇ ಕ್ವಾಟ್ರಸ್‌ನಲ್ಲಿ ಕುಡಿಯುವ ನೀರಿನ ಪೈಪ್ ಹೊಡೆದಿದ್ದು ನೀರು ಸೋರಿಕೆಯಾಗುತ್ತಿದ್ದು ಕೂಡಲೇ ಸಂಬಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳಬೇಕೆಂದು ವಿನಂತಿಸಿದರು.

**ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Manjunath.K

(ಶ್ರೀ. ಮಂಜುನಾಥ ಕೆ.)
**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿ**
**ವಾರ್ಡ್–42.**

(ಶ್ರೀ.ಎನ್.ರಮೇಶ್) 6/10/22
**ಸಹಾಯಕ ಕಂದಾಯ ಅಧಿಕಾರಿಗಳು**
**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**

**ಪ್ರತಿಯನ್ನು:–**

1. ವಲಯ ಆಯುಕ್ತರು, ರಾರಾನವ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ವಲಯ ಜಂಟಿ ಆಯುಕ್ತರು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.
3. ಅಧೀಕ್ಷಕ ಅಭಿಯಂತರರು, ವಾರ್ಡ್‌ಕಮಿಟಿ ಮೇಲುಸ್ತುವಾರಿ ಅಧಿಕಾರಿಗಳು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.